

ನಂದಾದೀಪ

ಗಿರೀಶ ಕಾರ್ನಾಡರೊಂದಿಗೆ ಸಂಪರ್ಕ ಹೊಂದಿದವರೆಲ್ಲ ಅವರ ಗಂಭೀರ ವ್ಯಕ್ತಿತ್ವವನ್ನು ಬಲ್ಲರು. ಆದರೆ, ಆ ಘನ ಗಂಭೀರ ಮೂರ್ತಿಯೊಳಗೂ ಕಿರಿಯರ ಬಗ್ಗೆ ಮಿಡಿಯಬಲ್ಲ ಅಂತಃಕರಣವಿದ್ದುದನ್ನು ಕೆಲವರಷ್ಟೇ ಅನುಭವಿಸಿ ಬಲ್ಲರು.

**ಚೈತನ್ಯ ಕೆ.ಎಂ.**

# ಮೂರ್ತಿ ಗಂಭೀರ ಮನಸು ಮಂದಾರ

**2002** ರಲ್ಲಿ ಲಂಡನ್‌ನಲ್ಲಿದ್ದ ಗಿರೀಶ ಕಾರ್ನಾಡರಿಂದ ನನಗೊಂದು ಆಹ್ವಾನ ದೊರಕಿತು. ಲಂಡನ್ನಿಗೆ ಹೋಗಲು ಅದು ಕಾರಣವಾಯಿತು.

ಭಾರತದ ಹೊರಗೆ ಅದು ನನ್ನ ಮೊದಲ ಪ್ರವಾಸವಾಗಿತ್ತು. ನಾನು ಲಂಡನ್ ತಲುಪಿದಾಗ ಸಂಜೆ. ನನ್ನನ್ನು ಕರೆದುಕೊಂಡು ಬರಲು ಕಾರ್ನಾಡರು ತಮ್ಮ ಅಧಿಕೃತ ವಾಹನವನ್ನು ಡ್ರೈವರ್ ಜೊತೆ ಕಳಿಸಿದ್ದರು. ಮನೆ ತಲುಪಿದಾಗ ಅವರ ಅಡುಗೆಯವನು ಕಾರ್ನಾಡರು ಬರೆದಿಟ್ಟಿದ್ದ ಪತ್ರ ಕೊಟ್ಟ. ಅದರಲ್ಲಿ ಕಾರ್ನಾಡರು, ತಾವು ತಮ್ಮ ಪತ್ನಿ ಸರಸ್ವತಿ ಗಣಪತಿ ಅವರೊಂದಿಗೆ ಹೊರಗೆ ಹೋಗಿರುವುದಾಗಿಯೂ, ಮಾರನೆಯ ಬೆಳಗ್ಗೆ ಲಂಡನ್ನಿಗೆ ಹಿಂದಿರುಗುವುದಾಗಿಯೂ ಬರೆದಿದ್ದರು. ಅಡುಗೆಯವನು ನನ್ನ ಕೊಠಡಿ ತೋರಿಸಿದ. ನಾನು ಊಟ ಮಾಡಿ ಮಲಗಿದೆ.

ಅಷ್ಟು ಹೊತ್ತಿಗೆ ಕಾರ್ನಾಡರೊಂದಿಗೆ ಎರಡು ಧಾರಾವಾಹಿಗಳು ಹಾಗೂ 'ಕಾನೂರು ಹೆಗ್ಗಡಿತಿ' ಸಿನಿಮಾದಲ್ಲಿ ಕೆಲಸ ಮಾಡಿದ್ದೆ. ನಂತರ ಭಾರತ ಸರ್ಕಾರ ಕಾರ್ನಾಡರನ್ನು ಲಂಡನ್‌ನ 'ನೆಹರು ಸೆಂಟರ್'ಗೆ ನಿರ್ದೇಶಕರಾಗಿ ನೇಮಿಸಿತ್ತು. 'ನೆಹರು ಸೆಂಟರ್', ಇಂಗ್ಲೆಂಡಿನ ಭಾರತದ ರಾಯಭಾರ ಕಚೇರಿಯ ಸಾಂಸ್ಕೃತಿಕ ಅಂಗವಾಗಿ ಇದ್ದ ಸಂಸ್ಥೆ. ಕಾರ್ನಾಡರಿಗೆ ರಾಯಭಾರದಲ್ಲಿ 'ಸಾಂಸ್ಕೃತಿಕ ಸಚಿವ' ಪದವಿ ಇತ್ತು.

ಲಂಡನ್‌ಗೆ ತಲುಪಿದ ಮಾರನೆಯ ದಿನ ಬೆಳಗ್ಗೆ ಎದ್ದಾಗ 8 ಗಂಟೆ. ತಡವಾಗಿದೆ ಎಂದು ಬೇಗ ರೆಡಿಯಾಗಿ ಮನೆಯ ಹಾಲಿಗೆ ಹೋದೆ. ಅಲ್ಲಿ ಕಾರ್ನಾಡ್ ದಂಪತಿ ದಿನಪತ್ರಿಕೆ ಓದುತ್ತ ಕೂತಿದ್ದರು. ಸಾಮಾನ್ಯವಾಗಿ ಬೆಳಗ್ಗೆ 6:30ಕ್ಕೆ ವಾಕಿಂಗ್‌ಗೆ ಹೋಗುತ್ತಿದ್ದ ಕಾರ್ನಾಡರು ಸುಮಾರು ಒಂದೂವರೆ ಗಂಟೆ ನಡೆದು ಹಿಂದಿರುಗುತ್ತಿದ್ದರು. ಆದರೆ ಅಂದು ಅವರು ಮಾರ್ನಿಂಗ್ ವಾಕ್‌ಗೆ ಹೊರಟಿರಲಿಲ್ಲ. 'ಬನ್ನಿ, ಒಂದು ಒಳ್ಳೆಯ ವಾಕ್ ಹೋಗಿಬರೋಣ' ಎಂದರು. 'ನೆಹರು ಸೆಂಟರ್' ಹಾಗೂ ಅದರ ಕಟ್ಟಡದಲ್ಲೇ ಇದ್ದ ಅವರ ಮನೆ ಲಂಡನ್‌ನ ಮಧ್ಯಭಾಗದಲ್ಲಿತ್ತು. ಅವರ ಮನೆಯ ಅತಿ ಸಮೀಪದಲ್ಲಿ ಜಗತ್ಪ್ರಸಿದ್ಧ 'ಹೈಡ್ ಪಾರ್ಕ್' ಇತ್ತು. ಕಾರ್ನಾಡರೊಂದಿಗೆ ನನ್ನ ಇಂಗ್ಲೆಂಡ್ ಪ್ರವಾಸ ಶುರುವಾಗಿದ್ದು ಅಲ್ಲಿ.